# ಯಶಸ್ಸು ಯಾರಿಗೆ?

ಸ್ವಾಮಿ ಪುರುಷೋತ್ತಮಾನಂದ

ಜೀವನದಲ್ಲಿ ಜಯಶಾಲಿಗಳಾಗುವವರು ಯಾರು? ಎಂಬ ಪ್ರಶ್ನೆಯೊಂದನ್ನು ಮುಂದಿಟ್ಟರೆ ಒಬ್ಬೊಬ್ಬರಿಂದ ಒಂದೊಂದು ಉತ್ತರ ಬಂದೀತು. 'ಬುದ್ಧಿವಂತನೇ ಜಯಿಸುವುದು' ಎಂದು ಒಬ್ಬನೆಂದರೆ 'ಬಲವಂತನಿಗೇ ಜಯ ಕಟ್ಟಿಟ್ಟದ್ದು' ಎಂದು ಇನ್ನೊಬ್ಬನೆಂದಾನು. 'ಇಲ್ಲ, ಇಲ್ಲ, ಕಾರ್ಯಶೀಲನೇ ಸದಾ ಜಯಶಾಲಿ' ಎಂದು ಮತ್ತೊಬ್ಬನೆನ್ನುತ್ತಾನೆ. 'ಹೃದಯವಂತಿಕೆಯುಳ್ಳವನೇ ಜಯಗಳಿಸುವುದು' ಎಂದು ಮಗದೊಬ್ಬನು ಹೇಳುತ್ತಾನೆ. ಈ ಉತ್ತರಗಳೆಲ್ಲ ತಪ್ಪಲ್ಲ. ಆದರೆ ಮನುಷ್ಯ ಬಲವಂತನೇ ಇರಲಿ, ಬುದ್ಧಿವಂತನೇ ಇರಲಿ, ಹೃದಯವಂತನೇ ಇರಲಿ ಅವನಲ್ಲಿ ಆತ್ಮವಿಶ್ವಾಸ ಹೊಂದಿಲ್ಲದಿದ್ದರೆ ಅವನು ಜಯಶಾಲಿಯಾಗುವುದು ಅಸಂಭವ.

**'ನಾವು ನೋಡಿ ನಡೆಯುವುದಲ್ಲ, ನಂಬಿ ನಡೆಯುತ್ತೇವೆ.'**

—ಬೈಬಲ್, ಹೊಸ ಒಡಂಬಡಿಕೆ.

**'ಶ್ರದ್ಧೆಯೇ ಜೀವನದ ಶಕ್ತಿ.'**

—ಟಾಲ್‌ಸ್ಟಾಯ್

ಜೀವನದಲ್ಲಿ ಯಶಸ್ವಿಯಾದ ಯಾವ ಮನುಷ್ಯನೇ ಆಗಲಿ ಅವನಿಗೆ ಯಾವುದೋ ಒಂದು ದಿನ ಯಾವುದೋ ಒಂದು ಶುಭ ಗಳಿಗೆಯಲ್ಲಿ ಯಾರೋ ಒಬ್ಬ ವ್ಯಕ್ತಿಯಿಂದ ಏನೋ ಒಂದು ಸಲಹೆಯೋ ಸಹಕಾರವೋ ದೊರಕಿರಲೇಬೇಕು. ಆದರೆ ಅವನು ಯಶಸ್ವಿಯಾಗುವುದಕ್ಕೆ ಈ ಸಲಹೆ-ಸಹಕಾರ ದೊರಕಿದ್ದು ಮಾತ್ರವೇ ಕಾರಣವಲ್ಲ. ಅದನ್ನು ಅವನು ಅರಿತು ಅಳವಡಿಸಿಕೊಂಡು ಕೌಶಲದಿಂದ ಹಾಗೂ ಶ್ರದ್ಧೆಯಿಂದ ಕಾರ್ಯತತ್ಪರನಾದುದೂ ಅಷ್ಟೇ ಪ್ರಧಾನ ಅಂಶ.

ಈ ಜಗತ್ತಿನಲ್ಲಿ ಸಿಗಬಹುದಾದ ಸಲಹೆ-ಸೂಚನೆಗಳಿಗೆ ಕೊರತೆಯೇ ಇಲ್ಲ. ಅಷ್ಟೇ ಅಲ್ಲ. ಮಾರ್ಗದರ್ಶನ ಮಾಡುತ್ತ ಸಹಕಾರ ನೀಡುವ ಉದಾರಿಗಳೂ ಹೇರಳವಾಗಿದ್ದಾರೆ. ಆದರೆ ಸೋಮಾರಿತನವನ್ನು ತ್ಯಜಿಸಿ ಪ್ರಾಮಾಣಿಕ ಭಾವದಿಂದ ಕಾರ್ಯೋನ್ಮುಖರಾಗಬಲ್ಲವರು ಮಾತ್ರ ಅತಿ ವಿರಳ. 'ಸುಲಭವಾಗಿ ಹಣ ಮಾಡುವ, ಸುಲಭವಾಗಿ ಕೀರ್ತಿ ಗಿಟ್ಟಿಸಿಕೊಳ್ಳುವ ಸಲಹೆಗಳಿದ್ದರೆ ಹೇಳಿ' ಎನ್ನುವ ಸುಲಭಜೀವಿಗಳೇ ಬಹು ಮಂದಿ.

**'ನಾವು ಕೊಡಗಟ್ಟಳೆ ಉಪದೇಶ ನೀಡುತ್ತೇವೆ, ಆದರೆ ಕಾಳಿನಷ್ಟು ಸ್ವೀಕರಿಸುತ್ತೇವೆ.'**

—ಡಬ್ಲ್ಯು.ಆರ್. ಆಲ್ಜರ್.

ಇಂದಿನ 'ಇನ್‌ಸ್ಟಂಟ್' ಯುಗದಲ್ಲಿ ಎಲ್ಲವೂ ಬಹು ಬೇಗನೆ ಬಹು ಸುಲಭವಾಗಿ ಆಗಿಬಿಡಬೇಕು. ಆದರೆ ಬೇಗನೆ ಬರುವಂತಹುದು ಬೇಗನೆ ಹೊರಟುಹೋಗುತ್ತದೆ. ನಿಜವಾದ ಯಶಸ್ಸು ಸುದೀರ್ಘ ಪ್ರಯತ್ನದಿಂದ ಮಾತ್ರ ದೊರೆಯುವಂತಹುದು. ಬುದ್ಧಿಯೊಂದಿಗೆ ಕಾರ್ಯಶೀಲತೆಯಿರುವ ಶ್ರದ್ಧಾವಂತ ಉತ್ಸಾಹಿಗಳ ಪಾಲಿಗೆ ಸಲಹೆ-ಸೂಚನೆಗಳೂ ಸಿಗುತ್ತವೆ, ಸಹಾಯ-ಸಹಕಾರಗಳೂ ಒದಗಿಬರುತ್ತವೆ. ಅವರು ಕೂಡ ಅವುಗಳನ್ನು ಸದುಪಯೋಗಪಡಿಸಿಕೊಳ್ಳುತ್ತ ಯಶಸ್ಸಿನ ಶಿಖರದತ್ತ ಏರುತ್ತಲೇ ಇರುತ್ತಾರೆ. ಶುದ್ಧ ಶೋಂಬೇರಿಗಳ ಪಾಲಿಗೆ ಮಾತ್ರ ಈ ಯಶಸ್ವಿಗಳ ವೈಭವವನ್ನು ಕಂಡು ಕರುಬುತ್ತಿರುವುದೆ ಕೆಲಸ!

ನಾನು ದೇವರನ್ನು ಕೇಳಿದೆ : 'ಮಾನವರ ವಿಚಾರದಲ್ಲಿ ನಿನಗೆ ಅತ್ಯಧಿಕ ಆಶ್ಚರ್ಯ ಹುಟ್ಟಿಸುವುದು ಯಾವುದು?' ದೇವರು ಉತ್ತರಿಸಿದ :

'ಅವರು ಹಣ ಪಡೆಯುವುದಕ್ಕಾಗಿ ಆರೋಗ್ಯವನ್ನು ಕಳೆದುಕೊಳ್ಳುತ್ತಾರೆ, ಆರೋಗ್ಯವನ್ನು ಪಡೆಯುವುದಕ್ಕಾಗಿ ಹಣ ಕಳೆದುಕೊಳ್ಳುತ್ತಾರೆ ; ಅವರು ಭವಿಷ್ಯವನ್ನು ಕಾತರತೆಯಿಂದ ನಿರೀಕ್ಷಿಸುತ್ತ ವರ್ತಮಾನವನ್ನು ಮರೆಯುತ್ತಾರೆ ; ಹೀಗಾಗಿ ಅವರು ವರ್ತಮಾನ ಭವಿಷ್ಯಗಳೆರಡನ್ನೂ ಕಳೆದುಕೊಳ್ಳುತ್ತಾರೆ; ಅವರು ತಾವು ಸಾಯುವುದೇ ಇಲ್ಲವೊ ಎನ್ನುವ ರೀತಿಯಲ್ಲಿ ಬಾಳುತ್ತಾರೆ ಮತ್ತು ಬಾಳಲೇ ಇಲ್ಲವೊ ಎನ್ನುವ ರೀತಿಯಲ್ಲಿ ಸಾಯುತ್ತಾರೆ— ಇದೇ ಅತ್ಯಂತ ಆಶ್ಚರ್ಯ.'

—ಸಂಗ್ರಹ